ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 68 ಎಸ್‌ಸಿಹೆಚ್(2) 2011-12
ಅಡಕ: ಅರ್ಜಿ ನಮೂನೆ, ಹಾಗೂ
ಅನುಬಂಧ-2 ಮತ್ತು 3

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 10-10-2011.

## ಸುತ್ತೋಲೆ

ವಿಷಯ: 2011-2012 ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರವರ್ಗ-1 ಮತ್ತು ಪೋಷಕರ ವಾರ್ಷಿಕ ವರಮಾನ ₹ 11,000/- ಹಾಗೂ ಅದಕ್ಕಿಂತ ಕಡಿಮೆಯಿರುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: (1) ಸರ್ಕಾರದ ಆದೇಶದ ಸಂ: [illegible]:29:ಟಿಪಿಐ:80 ದಿ: 16-12-82.
(2) ಸರ್ಕಾರದ ಆದೇಶ ಸಂಖ್ಯೆ: 116 ; ಟಿಪಿಐ:97, ದಿ: 17-6-2000

-00000000-

1 ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ನೋಡಲ್ ಸೆಂಟರ್ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ವಿದ್ಯಾರ್ಥಿಗಳಿಗೆ 2011-12 ನೇ ಸಾಲಿನಲ್ಲಿ ಶುಲ್ಕ ವಿನಾಯಿತಿಯನ್ನು ನೀಡಲು ಅರ್ಜಿಯನ್ನು ಕರೆಯಲಾಗಿದೆ. ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳು ಅರ್ಜಿ ನಮೂನೆ-2 ರಲ್ಲಿ, ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ₹ 11,000/- ಮೀರದ ವಿದ್ಯಾರ್ಥಿಗಳು ಯಾವುದೇ ಜಾತಿ ಮತ್ತು ವರ್ಗ(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಬಿಟ್ಟು) ದವರಾಗಿದ್ದರು ಅರ್ಜಿ ನಮೂನೆ-3ರಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಸೂಚನಾ ಫಲಕದಲ್ಲಿ ಪ್ರಕಟಣೆಯನ್ನು ಪ್ರಚುರ ಪಡಿಸಬೇಕು.

2 ವಿದ್ಯಾರ್ಥಿಗಳಿಂದ ಶುಲ್ಕ ವಿನಾಯಿತಿಗೆ ಪೂರ್ಣವಾಗಿ ತುಂಬಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಪಡೆಯಬೇಕು. ಅರ್ಜಿಯ ಜೊತೆಯಲ್ಲಿ ಈ ಪತ್ರದಲ್ಲಿ ತಿಳಿಸಿದ ಇತರೆ ದಾಖಲೆಗಳನ್ನು ಲಗತ್ತಿಸಿರಬೇಕು. ಒಂದು ಪ್ರತಿಯನ್ನು ಪಾಲಿಟೆಕ್ನಿಕ್‌ನ ಕಛೇರಿಯಲ್ಲಿ ದಾಖಲಾತಿಗೆ ಇಟ್ಟುಕೊಂಡು, ಮೂಲ ಅರ್ಜಿ(ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ) ಹಾಗೂ ಇತರ ಪ್ರಮಾಣ ಪತ್ರವನ್ನು ಈ ಕಛೇರಿಗೆ ಮಂಜೂರಾತಿಗಾಗಿ ಕಳುಹಿಸಿಕೊಡತಕ್ಕದ್ದು.

3 ಅರ್ಹ ವಿದ್ಯಾರ್ಥಿಗಳಿಂದ ಪಾಲಿಟೆಕ್ನಿಕ್‌ಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಅಂತಿಮ ದಿನಾಂಕ: **20-10-2011** ಎಂದು ನಿಗಧಿಪಡಿಸಲಾಗಿದೆ. ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಬಾರದು.

4 ಪೇಮೆಂಟ್ ಸೀಟು:- ಆಡಳಿತ ಮಂಡಳಿಯ ಕೋಟಾದಲ್ಲಿ ವಂತಿಗೆ ನೀಡಿ ಸೀಟು ಪಡೆದ ವಿದ್ಯಾರ್ಥಿಗಳು ಯಾವುದೇ ವಿದ್ಯಾರ್ಥಿ ವೇತನ ಅಥವಾ ಶುಲ್ಕ ವಿನಾಯಿತಿಗೆ ಅರ್ಹರಲ್ಲ.

5 ಶುಲ್ಕ ವಿನಾಯಿತಿಗೆ ಅರ್ಹವಾಗಿರುವ ಪ್ರಸ್ತಾವನೆಗಳನ್ನು ಮಂಜೂರಾತಿಗೆ ಕಳುಹಿಸುವ ಮುನ್ನ ಕೂಲಂಕುಷವಾಗಿ ಕೆಳಗೆ ನೀಡಿರುವ ಸೂಚನೆಯನುಸಾರ ಪರಿಶೀಲಿಸಿ ವಿದ್ಯಾರ್ಥಿಗಳ ಅರ್ಜಿ ಮತ್ತು ಅಗತ್ಯ ದೃಢೀಕರಿಸಿದ ಪ್ರಮಾಣ ಪತ್ರವನ್ನು ಕಳುಹಿಸಿಕೊಡಬೇಕು.

ಅ) ವಿದ್ಯಾರ್ಥಿಗಳು ಸಲ್ಲಿಸುವ ಜೆರಾಕ್ಸ್ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿರಬೇಕು.

ಆ) 2010-11 ಮತ್ತು 2011-12 ನೇ ಸಾಲಿನಲ್ಲಿ ಪ್ರಥಮ ವರ್ಷ ಡಿಪ್ಲೊಮಾಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕೇಂದ್ರೀಕೃತ ಪ್ರವೇಶ ಘಟಕದಲ್ಲಿ (ನೋಡಲ್ ಸೆಂಟರ್) ಪ್ರವೇಶ ಪಡೆದ ಬಗ್ಗೆ ಸೀಟು ಹಂಚಿಕೆ ಪತ್ರ ಲಗತ್ತಿಸಿರಬೇಕು. ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು, ಪ್ರಸಕ್ತ ಸಾಲಿನಲ್ಲಿ 2 ಮತ್ತು 3ನೇ ವರ್ಷ ಡಿಪ್ಲೊಮಾ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಹೊಸದಾಗಿ ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕರ್ನಾಟಕದಲ್ಲಿ ಕನಿಷ್ಟ 05 ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು.

ಇ) ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಲಾದ ಪರಿಷ್ಕರಿಸಿದ ಅರ್ಜಿಯಲ್ಲಿಯೇ ಮಾಹಿತಿ ತುಂಬಿ ಸಲ್ಲಿಸಬೇಕು. ಹಿಂದಿನ ಸಾಲಿನ ಅರ್ಜಿಯಲ್ಲಿ ಸಲ್ಲಿಸಿದ್ದಲ್ಲಿ ಪರಿಗಣಿಸಲಾಗುವುದಿಲ್ಲ. ಹೊಸದಾಗಿ ಶುಲ್ಕ ವಿನಾಯಿತಿಗೆ ಅರ್ಜಿ ಸಲಿಸುವ ವಿದ್ಯಾರ್ಥಿಗಳು ಉಚಿತ ಸೀಟು ಪಡೆದಿರುತ್ತಾರೆ ಎಂದು ಯಾವುದೇ [illegible] ಪಡೆದಿಲ್ಲವೆಂದು ಪ್ರಿನ್ಸಿಪಾಲರು ಅರ್ಜಿಯ ಅಡಿಯಲ್ಲಿ ದೃಢೀಕರಿಸಬೇಕು. ವಿದ್ಯಾರ್ಥಿಯು ಸ್ವತಃ ತುಂಬಿದ ಅರ್ಜಿಯನ್ನು ಕಳುಹಿಸಿಕೊಡಬೇಕು. ಜೆರಾಕ್ಸ್ ಮಾಡಿದ ಅರ್ಜಿಯನ್ನು ಸಲ್ಲಿಸಬಾರದು.

ಈ) ನವೀಕರಣವಾಗಿದ್ದ ಪಕ್ಷದಲ್ಲಿ ಹಿಂದಿನ ವರ್ಷ ಮಂಜೂರಾತಿಯ ಆದೇಶ ಕ್ರಮಾಂಕ ಮತ್ತು ದಿನಾಂಕ ನಮೂದಿಸಬೇಕು. ನವೀಕರಣ ಕೋರಿರುವ ಎಲ್ಲ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹಿಂದಿನ ಮಂಜೂರಾತಿಯ ಆದೇಶದ ಮತ್ತು ಅನುಬಂಧದ ಪ್ರತಿಗಳನ್ನು ಪಾಲಿಟೆಕ್ನಿಕ್‌ನ ಕಛೇರಿಯವರು ಪ್ರಸ್ತಾವನೆಯೊಂದಿಗೆ ಲಗತ್ತಿಸಿರಬೇಕು.

ಉ) ವಿದ್ಯಾರ್ಥಿಯು ಡಿಪ್ಲೋಮಾ ವ್ಯಾಸಂಗದ ಅವಧಿಯಲ್ಲಿ ವ್ಯಾಸಂಗವನ್ನು ಮೊಟಕುಗೊಳಿಸಿದ ಸಂದರ್ಭದಲ್ಲಿ ಆ ವಿವರವನ್ನು ಹಾಗೂ ಕಾರಣವನ್ನು ಅರ್ಜಿಯಲ್ಲಿ ನಮೂದಿಸಿರಬೇಕು. ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ ವಿದ್ಯಾರ್ಥಿಯು ಪ್ರತ್ಯೇಕವಾಗಿ ವಿವರಣೆ ಪತ್ರವನ್ನು ಲಗತ್ತಿಸಬೇಕು.

ಊ) ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳು ಜಾತಿ ಪರಿಶೀಲನೆ ಪ್ರಮಾಣ ಪತ್ರ ಅಥವಾ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಮಾತ್ರ ಸಲ್ಲಿಸಬೇಕು. ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ₹ 11,000/- ಮೀರದ ವಿದ್ಯಾರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ಅಥವಾ ಮೇಲ್ಪಟ್ಟ ಕಂದಾಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು.

ಋ) ವಿದ್ಯಾರ್ಥಿಯ ಸದ್ವರ್ತನೆ ಹಾಗೂ ನಿಯತ ಹಾಜರಾತಿಯನ್ನು ಗಮನಿಸಿ ಪ್ರತಿಯೊಂದು ವಿದ್ಯಾರ್ಥಿಯ ಅರ್ಜಿಯ ಅಡಿಯಲ್ಲಿ ಪ್ರಿನ್ಸಿಪಾಲರು ಲಿಖಿತವಾಗಿ ಶಿಫಾರಸ್ಸು ಮಾಡಿ ತಪ್ಪದೇ ಸಹಿ ಮಾಡಿ ಮೊಹರು ಹಾಕಿರಬೇಕು.

ೠ) ವಿದ್ಯಾರ್ಥಿಯ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಿರಬೇಕು. 2010ನೇ ಸಾಲಿನಲ್ಲಿ 2 ಮತ್ತು 3ನೇ ವರ್ಷ ಡಿಪ್ಲೋಮಾಗೆ ಸೇರ್ಪಡೆಯಾದ ವಿದ್ಯಾರ್ಥಿಗಳು ಹಿಂದಿನ ವರ್ಷಗಳ ಡಿಪ್ಲೋಮಾ ಪರೀಕ್ಷೆ (ಪೂರಕ ಪರೀಕ್ಷೆ ಸೇರಿದಂತೆ) ತೇರ್ಗಡೆಯಾದ ಎಲ್ಲಾ ಅಂಕಪಟ್ಟಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

6 ಅಂತಿಮ ದಿನಾಂಕದೊಳಗೆ ಬಂದ ಅರ್ಹರಾದ ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳ ಹೆಸರನ್ನು ಲಗತ್ತಿಸಿರುವ ಅನುಬಂಧ-2ರಲ್ಲಿ ಮತ್ತು ಕುಟುಂಬದ ಆದಾಯ ₹ 11,000/- ಮೀರದ ವಿದ್ಯಾರ್ಥಿಗಳ ಹೆಸರನ್ನು ಅನುಬಂಧ-3ರಲ್ಲಿ ಪಟ್ಟಿ ಮಾಡಿ ಎರಡು ಪ್ರತಿಗಳಲ್ಲಿ ಒಟ್ಟಾಗಿ ಕಳುಹಿಸಿಕೊಡಬೇಕು. ಪ್ರತಿಯೊಂದು ಪ್ರತಿಯ ಮೇಲೆ ಪ್ರಿನ್ಸಿಪಾಲರ ಸಹಿ ಹಾಗೂ ಮೊಹರು ಹಾಕಿರಬೇಕು. ಪ್ರತಿಯೊಂದು ಪ್ರತಿಯಲ್ಲಿಯೂ ಎಲ್ಲಾ ಪ್ರಮಾಣ ಪತ್ರಗಳನ್ನು ದೃಢೀಕರಿಸಬೇಕು. ಪ್ರಸ್ತಾವನೆಯನ್ನು ಒಬ್ಬೊಬ್ಬ ವಿದ್ಯಾರ್ಥಿಗೆ ಪ್ರತ್ಯೇಕವಾಗಿ ಸಲ್ಲಿಸಬಾರದು ಹಾಗೂ ವಿದ್ಯಾರ್ಥಿ ಮುಖೇನ ಈ ಕಛೇರಿಗೆ ಕಳುಹಿಸಿಕೊಡಬಾರದು. ಎಲ್ಲಾ ಅರ್ಹ ವಿದ್ಯಾರ್ಥಿಗಳ ಪ್ರಸ್ತಾವನೆಯನ್ನು ಬಿಡಿಬಿಡಿಯಾಗಿ ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು. ಇದರಿಂದುಂಟಾಗುವ ವಿಳಂಬಕ್ಕೆ ಮತ್ತು ಮಂಜೂರಾತಿ ಆಗದ ವಿದ್ಯಾರ್ಥಿಗಳಿಗೆ ಕೈ ತಪ್ಪುವ ಸೌಲಭ್ಯ ವಿನಾಯಿತಿಗಳಿಗೆ ಆಯಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರೆ ಪೂರ್ಣ ಜವಾಬ್ದಾರರಾಗುತ್ತಾರೆ.

7 ಅನುಬಂಧ-(2) ಮತ್ತು (3)ರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಲಭ್ಯವಾಗುವ ಶುಲ್ಕ ವಿನಾಯಿತಿಗಳನ್ನು ಸರ್ಕಾರದ ಆದೇಶದನ್ವಯ ಪ್ರತ್ಯೇಕವಾಗಿ ಐಟಂ ಪ್ರಕಾರ ಕ್ಲೇಮು ಮಾಡಬೇಕು. ಒಟ್ಟಾರೆ ನಮೂದಿಸಿದ್ದಲ್ಲಿ ಅಂಗೀಕರಿಸಲಾಗುವುದಿಲ್ಲ . ಕುಟುಂಬದ ಆದಾಯ ₹ 11,000/-ಕ್ಕಿಂತ ಕಡಿಮೆಯಿರುವ ವಿದ್ಯಾರ್ಥಿಗಳು ಬೋಧನಾ ಶುಲ್ಕ ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮಾತ್ರ ಕ್ಲೇಮು ಮಾಡಬೇಕು. ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳು ಯಾವುದೇ ಆದಾಯ ಮಿತಿ ಇರುವುದಿಲ್ಲ ಹಾಗೂ ಎಲ್ಲಾ ಶುಲ್ಕಗಳ ರಿಯಾಯಿತಿ ಇರುತ್ತದೆ. ಅನುಬಂಧ-(2) ಮತ್ತು (3) ರಲ್ಲಿ ಉಲ್ಲೇಖ (3) ರ ಸರ್ಕಾರದ ಆದೇಶ ಪ್ರಕಾರ ಬೋಧನಾ ಶುಲ್ಕ ಕ್ಲೇಮು ಮಾಡಬೇಕು. ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಪರೀಕ್ಷಾ ಶುಲ್ಕ ವಿನಾಯಿತಿ ಪಡೆದಿದ್ದ ಪಕ್ಷದಲ್ಲಿ, ಪರೀಕ್ಷಾ ಶುಲ್ಕವನ್ನು ಕ್ಲೇಮು ಮಾಡಬಾರದು.

8 ವಿದ್ಯಾರ್ಥಿಗಳ ಶುಲ್ಕ ವಿನಾಯಿತಿಯ ಮಂಜೂರಾತಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿರುವ ವಿಧಾನ, ಅರ್ಹತೆಯನ್ನು ಮಾಡಿ ಮಂಜೂರಾತಿ ಆದ ಅಥವಾ ಮಂಜೂರಾತಿಯಾಗದ ಆಕ್ಷೇಪಣೆಗಳ ಬಗ್ಗೆ ಕೆಲವು ಪಾಲಿಟೆಕ್ನಿಕ್‌ನವರು ಸೂಚನಾ ಫಲಕಗಳಲ್ಲಿ ಪ್ರಚುರ ಪಡಿಸದೆ ; ತಿಳಿಸದೆ ಅನೇಕ ಎಲ್ಲ ವಿದ್ಯಾರ್ಥಿಗಳನ್ನು ಈ ನಿರ್ದೇಶನಾಲಯಕ್ಕೆ ನೇರವಾಗಿ ಕಳುಹಿಸುತ್ತಿರುವುದು ನಿರ್ದೇಶಕರ ಗಮನಕ್ಕೆ ಬಂದಿದೆ. ಇಂತಹ ಪ್ರಕರಣಗಳನ್ನು ತಡೆಗಟ್ಟುವ ರೀತಿಯಲ್ಲಿ ಆಯಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

9 ಶುಲ್ಕ ವಿನಾಯಿತಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಅನುಮೋದನೆಗಾಗಿ ಕಳುಹಿಸಲು **30-10-2011** ರಂದು ಅಂತಿಮ ದಿನಾಂಕ ಎಂದು ನಿಗದಿಪಡಿಸಿದೆ. ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಹಾಗೂ ಉಲ್ಲೇಖ (1) ರಲ್ಲಿ ಸರ್ಕಾರದ ಆದೇಶದ ಪ್ರಕಾರ ತಿರಸ್ಕರಿಸಲಾಗುವುದು. ಅಲ್ಲದೆ ಈ ಪ್ರಸಕ್ತ ವರ್ಷಕ್ಕೆ ಸಂಬಂಧಿಸಿದಂತೆ ದಿನಾಂಕ: **20/10/2011** ರೊಳಗೆ ಮಂಜೂರಾತಿ ಪಡೆದು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಬಿಲ್ ಮೇಲು ಸಹಿ ಪಡೆದು ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿರುತ್ತದೆ. ಆದ್ದರಿಂದ ಡಿಸೆಂಬರ್ 30 ರೊಳಗೆ ಮಂಜೂರಾತಿ ಪಡೆಯಲು ಸಿದ್ಧಪಡಿಸಲು ಕೋರಲಾಗಿದೆ.

10 ಈ ಕಛೇರಿಯಿಂದ ಅನುಮೋದನೆ ಪಡೆದ ಒಂದು ವಾರದೊಳಗೆ ಕೆ.ಎಫ್.ಸಿ. 32 ಎ ಫಾರಂ (ಪಿಂಕ್ ಬಣ್ಣದ ಕಾಗದದಲ್ಲಿ) ನಲ್ಲಿ ಬಿಲ್ ತಯಾರಿಸಿ ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಮೇಲು ಸಹಿಗಾಗಿ ಕಳುಹಿಸಬೇಕು. ಆ ಇಲಾಖೆಯಿಂದ ಬಿಲ್ ಬಂದ ನಂತರ ಸೂಚನಾ ಫಲಕಗಳಲ್ಲಿ, ವಿದ್ಯಾರ್ಥಿಗಳ ಹಣವನ್ನು ಪಡೆಯಲು 15 ದಿನಗಳ ಕಾಲಾವಕಾಶ ಕೊಟ್ಟು ಸೂಚನೆಯನ್ನು ಪ್ರಕಟಿಸಬೇಕು. ಆರ್ಥಿಕ ವರ್ಷ ಮುಕ್ತಾಯವಾದ ನಂತರ ಸಲ್ಲಿಸುವ ಬಿಲ್ಲನ್ನು ಆ ಇಲಾಖೆಯು ಮೇಲು ಸಹಿಗೆ ಪರಿಗಣಿಸುವುದಿಲ್ಲ. ವಿದ್ಯಾರ್ಥಿಗಳ ಶುಲ್ಕ ವಿನಾಯಿತಿಯ ಮೊತ್ತವನ್ನು ವಿತರಣೆ ಮಾಡಿ ವಿದ್ಯಾರ್ಥಿಗಳ ಸಹಿ ಇರುವ ರಸೀದಿಯನ್ನು ಪಡೆದು ಮೂಲ ರಸೀದಿಯನ್ನು ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಹಾಗೂ ಒಂದು ಪ್ರತಿಯನ್ನು ಈ ನಿರ್ದೇಶನಾಲಯಕ್ಕೆ ಕಳುಹಿಸಿಕೊಡಬೇಕು. ಮತ್ತೊಂದು ಪ್ರತಿಯನ್ನು ದಾಖಲೆಗಾಗಿ ಹಾಗೂ ಪರಿಶೀಲನೆಗಾಗಿ ನಿಮ್ಮ ಸಂಸ್ಥೆಯಲ್ಲಿ ಇಟ್ಟುಕೊಳ್ಳಬೇಕು. ಶುಲ್ಕ ವಿನಾಯಿತಿಯ ಸದುಪಯೋಗದ ಬಗ್ಗೆ ಪರಿಶೀಲಿಸಲು ಶುಲ್ಕ ವಿನಾಯಿತಿಯ ಸೌಲಭ್ಯ ಪಡೆದ ವಿದ್ಯಾರ್ಥಿಯ ಹೆಸರು. ತಂದೆಯ ಹೆಸರು, ವಿಳಾಸ. ಜಾತಿ. ವರ್ಗ. ಕುಟುಂಬದ ವಾರ್ಷಿಕ ಆದಾಯ. ವ್ಯಾಸಂಗ ಮಾಡುತ್ತಿರುವ ಕೋರ್ಸ್ ಮತ್ತು ಶುಲ್ಕ ಮರುಪಾವತಿ ಮೊತ್ತದ ವಿವರವನ್ನು ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ದಾಖಲೆ ಇಡತಕ್ಕದ್ದು. ಗೊತ್ತು ಪಡಿಸಿದ ದಿನಾಂಕವಾದ ಮೇಲೆ ಪಾವತಿ ಮಾಡದೇ ಉಳಿದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಹಣಕ್ಕೆ ಚಲನ್ ಕಾಪಿಯನ್ನು ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಕಳುಹಿಸಬೇಕು ಮತ್ತು ಇದರ ಜೊತೆಗೆ ಪಾವತಿಯಾಗದಿದ್ದ ವಿದ್ಯಾರ್ಥಿಗಳ ಹೆಸರು, ತರಗತಿ, ವಿಭಾಗ ಮತ್ತು ಪಾವತಿ ಮಾಡಲು ಸಾಧ್ಯವಾಗದುದಕ್ಕೆ ಕಾರಣವನ್ನು ತಿಳಿಸಿ ವಿವರಣಾ ಪಟ್ಟಿಯನ್ನು ಕಳುಹಿಸಬೇಕು.

11 ಮಂಜೂರಾತಿಯಲ್ಲಿ ವಿಳಂಬವನ್ನು ತಪ್ಪಿಸಲು ನೀಡಿರುವ ತಿಳುವಳಿಕೆಗೆ ಅನುಗುಣವಾಗಿ ಪ್ರಸ್ತಾವನೆಯನು ಸಂಬಂಧಪಟ್ಟ ಪ್ರಮಾಣ ಪತ್ರಗಳೊಡನೆ ನಿಗದಿಪಡಿಸಿದ ದಿನಾಂಕ ಅಂದರೆ **30/10/2011** ರ ಒಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಬೇಕು.

**ವಿಶೇಷ ಸೂಚನೆ:**

ಶಿಕ್ಷಣ ಸಂಸ್ಥೆಯವರು ಪ್ರಸ್ತಾವನೆಯನ್ನು ಅನುಬಂಧ-1 ರ [illegible] ಪ್ರತಿಗಳಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ ಒಂದು ಸಾಫ್ಟ್ ಕಾಪಿಯನ್ನು(ಸಿ.ಡಿ ಮುಖಾಂತರ) ಈ ಕೆಳಕಂಡ ಅವಶ್ಯಕ ಪ್ರಮಾಣ ಪತ್ರ ದೃಢೀಕರಿಸಿದ ಪ್ರತಿಯನ್ನು ತಪ್ಪದೇ ಸಲ್ಲಿಸಬೇಕು.

ಅ) ಅಭ್ಯರ್ಥಿಯು ಹಿಂದಿನ ವರ್ಷದ ಎಲ್ಲಾ ಅಂಕಪಟ್ಟಿಗಳ ಪ್ರತಿ ಹಾಗೂ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಪ್ರತಿ.

ಆ) ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳು, ಜಾತಿ ಅಥವಾ ಸಿಂಧುತ್ವ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು.

ಇ) ಕುಟುಂಬದ ವಾರ್ಷಿಕ ಆದಾಯ ₹ 11,000/- ಮೀರದ ತಂದೆ:ತಾಯಿ:ಪೋಷಕರ ವೇತನ ದೃಢೀಕರಣ ಪತ್ರದ ಪ್ರತಿ (ಪ್ಯಾರಾ 5ರ(ಉ)ರಂತೆ)

ಈ) ತಂದೆ:ತಾಯಿ ಮೃತ ಹೊಂದಿದ್ದರೆ ಮರಣ ಪ್ರಮಾಣ ಪತ್ರದ ಪ್ರತಿ.

ಉ) ವ್ಯಾಸಂಗ ಮಾಡುವ ಬಗ್ಗೆ ಪ್ರಮಾಣ ಪತ್ರ (ಪ್ಯಾರಾ 5ರ( ಅ)ರಂತೆ)

ಊ) ಶುಲ್ಕ ವಿನಾಯಿತಿ ನವೀಕರಣವಾಗಿದ್ದಲ್ಲಿ ಆ ಎಲ್ಲಾ ವಿದ್ಯಾರ್ಥಿಗಳಿಗೆ ಹಿಂದೆ ಶುಲ್ಕ ವಿನಾಯಿತಿ ಮಂಜೂರಾದ ಆದೇಶ ಮತ್ತು ಅನುಬಂಧದ ಪ್ರತಿಗಳನ್ನು ಸಂಸ್ಥೆಯವರು ಲಗತ್ತಿಸಬೇಕು.

***ಅಪೂರ್ಣ ಅರ್ಜಿ ಹಾಗೂ ಇತರ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ, ಮತ್ತು ನಿಗಧಿಪಡಿಸಿದ ದಿನಾಂಕದ ನಂತರ ಬಂದ ವಿದ್ಯಾರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗಧಿಪಡಿಸಿದ ದಿನಾಂಕದೊಳಗೆ ಅರ್ಜಿ ಸಲ್ಲಿಸದೇ, ಮಂಜೂರಾತಿ ಪಡೆಯದಿದ್ದಲ್ಲಿ ಆಗುಹೋಗುಗಳಿಗೆ ಪ್ರಿನ್ಸಿಪಾಲರು ಹಾಗೂ ಆಡಳಿತ ಮಂಡಳಿಯವರು ಪೂರ್ಣ ಜವಾಬ್ದಾರರಾಗುತ್ತಾರೆ.***

**ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ವಿವರ, ಅರ್ಜಿನಮೂನೆ ಮತ್ತು ಅನುಬಂಧಗಳನ್ನು ಈ ಇಲಾಖೆಯ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು**

**www.dte.kar.nic.in**

ಸಹ ನಿರ್ದೇಶಕರು(ಅ)

ಇವರಿಗೆ.

1. ಪ್ರಿನ್ಸಿಪಾಲರು, ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು (ಒಂದು ಪ್ರತಿ ಸೂಚನಾ ಫಲಕಗಳಿಗೆ) ಇವರ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಅರ್ಜಿ ನಮೂನೆ 2, 3 ಹಾಗೂ ಅನುಬಂಧ-2, 3 ಮಾಹಿತಿಗಾಗಿ ಲಗತ್ತಿಸಲಾಗಿದೆ)
2. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
3. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
4. ಕಛೇರಿ ಪ್ರತಿ.

## <u>ಅರ್ಜಿ ನಮೂನೆ-2</u>

ಪ್ರವರ್ಗ-1 ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗೆ ಸಲ್ಲಿಸುವ ಅರ್ಜಿ 2011-2012 ನೇ ಸಾಲಿಗೆ

ಅ) ಅಭ್ಯರ್ಥಿಯ ಹೆಸರು (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಇರುವಂತೆ) :

ಆ) ತಂದೆ/ತಾಯಿ/ಪೋಷಕರ ಹೆಸರು ಮತ್ತು ವಿಳಾಸ :
(ತಂದೆ : ತಾಯಿ ಮರಣಹೊಂದಿದ್ದರೆ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಬೇಕು)

ಇ) ಅಭ್ಯರ್ಥಿಯು ಯಾವ ಕೋಟಾದಲ್ಲಿ ಪ್ರವೇಶ ಪಡೆದಿರುತ್ತಾರೆ (ನೋಡಲ್ ಸೆಂಟರ್‌ನ ಸೀಟು ಹಂಚಿಕೆ ಪತ್ರ ಲಗತ್ತಿಸಬೇಕು)

ಈ) ಕರ್ನಾಟಕದಲ್ಲಿ ಖಾಯಂ ವಾಸಸ್ಥರಾಗಿರುವರೇ? (ಹೌದು/ಇಲ್ಲ) ಎಂದು ಉತ್ತರಿಸಬೇಕು.

ಉ) ಕುಟುಂಬದ ವಾರ್ಷಿಕ ವರಮಾನ :
೧) ವರಮಾನ ಮೂಲ
೨) ವಾರ್ಷಿಕ ವರಮಾನ ಒಟ್ಟು ಮೊಬಲಗು

ಊ) ಅಭ್ಯರ್ಥಿಯು ಈ ಶೈಕ್ಷಣಿಕ ವರ್ಷದಲ್ಲಿ ಓದುತ್ತಿರುವ ತರಗತಿ ಮತ್ತು ವಿಭಾಗ. :

ಋ) ಅಭ್ಯರ್ಥಿಯು ಪ್ರವರ್ಗ-೧ ಕ್ಕೆ ಸೇರಿದವರೇ ಸೇರಿದ್ದಲ್ಲಿ ಜಾತಿ ಪ್ರಮಾಣ ಪತ್ರದ ನಕಲನ್ನು ಲಗತ್ತಿಸಬೇಕು. :

ೠ) ಡಿಪ್ಲೋಮಾ ವಿದ್ಯಾಭ್ಯಾಸವನ್ನು ಮಧ್ಯದಲ್ಲಿ ಮೊಟಕುಗೊಳಿಸಿದ್ದರೆ ಆ ಅವಧಿ ಮತ್ತು ಕಾರಣವನ್ನು ತಿಳಿಸಬೇಕು. (ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ ವಿದ್ಯಾರ್ಥಿಯಿಂದ ವಿವರಣೆ ಪತ್ರ ಲಗತ್ತಿಸಬೇಕು) :

ಎ) ಅಭ್ಯರ್ಥಿಗೆ ಈ ಹಿಂದಿನ ವರ್ಷದಲ್ಲಿ ಇದೇ ವಿನಾಯಿತಿ ಬರುತ್ತಿತ್ತೇ? :
೧) ಇಲ್ಲದಿದ್ದರೆ ಕಾರಣ
೨) ಬರುತ್ತಿದ್ದರೆ ಹಿಂದಿನ ವರ್ಷದಲ್ಲಿ ಮಂಜೂರು ಮಾಡಿದ್ದ ಆದೇಶ ಸಂಖ್ಯೆ ದಿನಾಂಕ ಮತ್ತು ಮೊಬಲಗು

ಏ) ಅಭ್ಯರ್ಥಿಯು ಮುಂದಿನ ತರಗತಿಗೆ ತೇರ್ಗಡೆಯಾಗಿದ್ದಾನೆಯೆ? :
(ಬ್ಯಾಕ್‌ಲಾಗ್ ವಿಷಯ ತೇರ್ಗಡೆಯಾದ ಅಂಕಪಟ್ಟಿ ಸೇರಿದಂತೆ ಎಲ್ಲಾ ಅಂಕಪಟ್ಟಿಗಳು ಲಗತ್ತಿಸಬೇಕು)

ಅಭ್ಯರ್ಥಿಯ ತಂದೆ:ತಾಯಿ : ಪೋಷಕರ ಸಹಿ
(ತಂದೆ : ತಾಯಿ) ಇಲ್ಲದಿದ್ದಲ್ಲಿ

ಅಭ್ಯರ್ಥಿಯ ಸಹಿ
ದಿನಾಂಕ:

ಅಭ್ಯರ್ಥಿಯು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದಿರುತ್ತಾರೆಂದು ಯಾವುದೇ ವಂತಿಗೆ ಪಡೆದಿಲ್ಲವೆಂದು ದೃಢೀಕರಿಸಿದೆ. ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ, ಶಿಫಾರಸ್ಸು ಮಾಡಿದೆ.

ಪ್ರಿನ್ಸಿಪಾಲರ ಸಹಿ
ಮೊಹರು.

| ಕ್ರ. ಸಂ. | ಪ್ರಮಾಣ ಪತ್ರಗಳು | ಲಗತ್ತಿಸಲಾಗಿದೆಯೇ ಹೌದು/ಇಲ್ಲ | ಕ್ರ. ಸಂ. | ಪ್ರಮಾಣ ಪತ್ರಗಳು | ಲಗತ್ತಿಸಲಾಗಿದೆಯೇ ಹೌದು/ಇಲ್ಲ |
|---|---|---|---|---|---|
| 1) | ಆದಾಯ ಪ್ರಮಾಣ ಪತ್ರ | | 4) | ಎಸ್‌ಎಸ್‌ಎಲ್‌ಸಿ | |
| 2) | ಜಾತಿ ಪ್ರಮಾಣ ಪತ್ರ | | 5) | ನೋಡಲ್ ಸೆಂಟರ್‌ನ ಸೀಟು ಹಂಚಿಕೆ ಪತ್ರ | |
| 3) | ಹಿಂದಿನ ವರ್ಷಗಳ ಅಂಕಪಟ್ಟಿ | | | | |

ಅನುಬಂಧ–3

ಪಾಲಿಟೆಕ್ನಿಕ್‌ನ ಹೆಸರು––––––––––––––––––––––––––––––––––

2011-2012 ನೇ ಸಾಲಿಗೆ ಕುಟುಂಬದ ವಾರ್ಷಿಕ ವರಮಾನ ₹ 11,000/- ಮೀರದ ಇರುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲು ವಿವರಗಳ ಪಟ್ಟಿ

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ತರಗತಿ ಮತ್ತು ವಿಭಾಗ | ಪ್ರವರ್ಗ IIಎ, IIಬಿ, IIIಎ, IIIಬಿ, ಮತ್ತು ವಾರ್ಷಿಕ ಆದಾಯ | ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ತೇರ್ಗಡೆಯಾಗಿದ್ದು ಪಡೆದ ಅಂಕಗಳ ಶೇಕಡಾವಾರು | ವಿದ್ಯಾರ್ಥಿಯು ಈ ಕಾಲೇಜಿನಲ್ಲಿ ಪ್ರವೇಶ ಪಡೆದ ... ಹಿಂದಿನ ವರ್ಷ ಮಂಜೂರಾದ ಆದೇಶ ಕ್ರಮ ಸಂಖ್ಯೆ ದಿನಾಂಕ | ಈ ವಿನಾಯಿತಿಗೆ ಅರ್ಹತೆ ಇರುವ | ವಿದ್ಯಾರ್ಥಿಗೆ ಬೇರೆ ಯಾವುದಾದರು ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೆ ವಿವರ | ಮಂಜೂರಾದ ಶುಲ್ಕ ವಿನಾಯಿತಿಯ ವಿವರಗಳು (ಬಿಡುಗಡೆ ಮಾಡಬೇಕಾದ ಮೊತ್ತ) ಬೋಧನಾ ಶುಲ್ಕ | ಪ್ರಯೋಗಾಲಯ ಶುಲ್ಕ | ಪರೀಕ್ಷಾ ಶುಲ್ಕ | ಇತ್ಯಾದಿ | ಒಟ್ಟು |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | | | | | | | | | | | | |
| 2 | | | | | | | | | | | | |
| 3 | | | | | | | | | | | | |
| 4 | | | | | | | | | | | | |
| 5 | | | | | | | | | | | | |

<u>ಸಂಸ್ಥೆಯ ಮುಖ್ಯಸ್ಥರು ಪ್ರಮಾಣೀಕರಿಸಬೇಕಾದ ಪ್ರಮಾಣ ಪತ್ರಗಳು</u>

01. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಆದ್ದರಿಂದ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆಂದು ದೃಢೀಕರಿಸಿದೆ.
02. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ ವಿದ್ಯಾರ್ಥಿ ವೇತನ ಪಡೆಯುತ್ತಿಲ್ಲ.
03. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಬಿಲ್‌ನಲ್ಲೂ ಕ್ಲೈಮ್ ಮಾಡಿರುವುದಿಲ್ಲ.
04. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1ಕ್ಕೆ ಸೇರಿರುವುದಿಲ್ಲ.
05. ಪ್ರಸಕ್ತ ಸಾಲಿನ ಕುಟುಂಬದ ವಾರ್ಷಿಕ ವರಮಾನದ ಬಗ್ಗೆ ಸಂಬಂಧಪಟ್ಟ ತಹಸೀಲ್ದಾರರಿಂದ ಪಡೆದಿರುವ ಆದಾಯ ಪ್ರಮಾಣ ಪತ್ರವನ್ನು ಸ್ವೀಕರಿಸಿದೆ. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ. 11,000/- ಮೀರಿರುವುದಿಲ್ಲ. ... ಸಂಖ್ಯೆ ... ದಿನಾಂಕ ... ಮತ್ತು ... ಆದೇಶಗಳ ಪ್ರಕಾರ ನಿಯಮಗಳನ್ನು ಪಾಲಿಸಲಾಗಿದೆ.
06. ಮುಂದೆ ಲೆಕ್ಕಪರಿಶೋಧನೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಆ ಹಣವನ್ನು ಸಂಸ್ಥೆಯ ಮುಖ್ಯಸ್ಥರು ಸರ್ಕಾರಕ್ಕೆ ಮರುಪಾವತಿ ಮಾಡುತ್ತೇನೆ.
07. ವಿದ್ಯಾರ್ಥಿ/ಥಿನಿಯರ ಹೆಸರು ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪಿರುವುದು ಕಂಡಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊತ್ತವನ್ನು ವಾಪಸ್ಸು ಸಂದಾಯ ಮಾಡುತ್ತೇನೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.
08. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆಯುವಾಗ ಯಾವ ವಂತಿಗೆ ಹಣವನ್ನು ನೀಡಿಲ್ಲ.
09. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸಾರ ವ್ಯಾಸಂಗ ಮಾಡುತ್ತಿದ್ದಾರೆ.
10. ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ಶುಲ್ಕ ವಿನಾಯಿತಿಯ ಹಣವನ್ನು ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ಮರುಪಾವತಿ ಮಾಡಲಾಗಿದೆ. ಪಾವತಿ ಮಾಡಿದ ಸ್ಟ್ಯಾಂಪ್ ರಶೀದಿಯನ್ನು ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರಿಗೆ ಕಳುಹಿಸಿ ಕೊಡಲಾಗಿದೆ. ಕ್ರ. ಸಂ.–––––––––––––––––––––––––––– ದಿನಾಂಕ––––––––––––––––.
11. ಬಾಕಿ ಮಾಡಬೇಕಾದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಪ್ರತಿಯನ್ನು ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರಿಗೆ ಕಳುಹಿಸಿದೆ ಎಂದು ದೃಢೀಕರಿಸಿದೆ ಕ್ರ. ಸಂ. ––––––––––––––––––––––––

ದಿನಾಂಕ:––––––––––––––––.

12. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದವರೆಂದು ದೃಢೀಕರಿಸಲಾಗಿದೆ.

ದಿನಾಂಕ:

ಸ್ಥಳ:

ಪ್ರಾಂಶುಪಾಲರು

ಅನುಬಂಧ-2

ಪಾಲಿಟೆಕ್ನಿಕ್‌ನ ಹೆಸರು-----------------------------------------

2011-2012 ನೇ ಸಾಲಿಗೆ ಪ್ರವರ್ಗ-1 ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲು ವಿವರಗಳ ಪಟ್ಟಿ

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ತರಗತಿ ಮತ್ತು ವಿಭಾಗ | ಜಾತಿ ಮತ್ತು ಪ್ರವರ್ಗವನ್ನು ನಮೂದಿಸುವುದು | ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ತೇರ್ಗಡೆಯಾಗಿದ್ದಲ್ಲಿ ಶೇಕಡಾವಾರು ಅಂಕ | ವಿದ್ಯಾರ್ಥಿಯ ಆದಾಯವನ್ನು ಪೋಷಕರ ಆದಾಯ ಸಹಿತ ... | ಈ ವಿನಾಯಿತಿಗೆ ಅರ್ಹತೆ ಇದೆಯೆ | ವಿದ್ಯಾರ್ಥಿಗೆ ಬೇರೆ ಯಾವುದಾದರು ವಿದ್ಯಾರ್ಥಿ ವೇತನ ದೊರೆಯುತ್ತಿದ್ದರೆ ವಿವರ | ಮಂಜೂರು ಮಾಡಬೇಕಾದ ಶುಲ್ಕ ವಿನಾಯಿತಿಯ ವಿವರ (... ರೂ.ಗಳಲ್ಲಿ) | | | | | | | |
|---|---|---|---|---|---|---|---|---|---|---|---|---|---|---|---|
| | | | | | | | | ಬೋಧನಾ ಶುಲ್ಕ | ಪ್ರವೇಶ ಶುಲ್ಕ (ಪ್ರಥಮ ವರ್ಷಕ್ಕೆ ಮಾತ್ರ) | ಪ್ರಯೋಗಾಲಯ ಶುಲ್ಕ | ವಾಚನಾಲಯ ಶುಲ್ಕ | ಪರೀಕ್ಷಾ ಶುಲ್ಕ | ಇತರೆ ಶುಲ್ಕ * | ಒಟ್ಟು | ಷರಾ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1. | | | | | | | | | | | | | | | |
| 2. | | | | | | | | | | | | | | | |
| 3. | | | | | | | | | | | | | | | |
| 4. | | | | | | | | | | | | | | | |
| 5. | | | | | | | | | | | | | | | |

* ಇತರೆ ಶುಲ್ಕ (₹): (1) ಕ್ರೀಡೆ ₹ 65/- (2) ಸಂಘ ಶುಲ್ಕ ₹ 55/- (3) ಗುರುತಿನ ಚೀಟಿ ₹ 10/- (4) ನಿಯತಕಾಲಿಕೆ ₹ 50/- (5) ಒಟ್ಟು ₹ 180/-

(1) ಪ್ರವೇಶ ಶುಲ್ಕ ₹ 25/- (2) ವಾಚನಾಲಯ ಶುಲ್ಕ ₹ 50/- (3) ಪ್ರಯೋಗಾಲಯ ಶುಲ್ಕ ₹ 75/-

**ಸಂಸ್ಥೆಯ ಪ್ರಾಂಶುಪಾಲರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ಪ್ರಮಾಣ ಪತ್ರಗಳು**

1. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಪೂರ್ಣ ಶುಲ್ಕ ವಿನಾಯಿತಿಗೆ ಅರ್ಹರಾಗಿರುವುದರಿಂದ ದೃಢೀಕರಿಸಿದೆ.
2. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.
3. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಮೂಲದಿಂದಲೂ ಕ್ಲೈಮ್ ಮಾಡಿರುವುದಿಲ್ಲ.
4. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ನ ಪ್ರವೇಶದ ದಾಖಲೆಯನ್ವಯ ಪ್ರವರ್ಗ-1 ಕ್ಕೆ ಸೇರಿದವರಾಗಿರುತ್ತಾರೆ. ಸ. ಆದೇಶ ಸಂ: ಎಸ್‌ಡಬ್ಲ್ಯೂಡಿ : 150 : ಬಿಸಿಎ: 94 ದಿ: 17/09/94 ಮತ್ತು ನಂತರ ಹೊರಡಿಸಿದ ಆದೇಶಗಳ ಪ್ರಕಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದೆ.
5. ಮುಂದೆ ಕೊಡಿಕೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ಅಧಿಕಾರಿಗಳು ಸರ್ಕಾರಕ್ಕೆ ಮರುಪಾವತಿ ಮಾಡುತ್ತೇವೆ.
6. ವಿದ್ಯಾರ್ಥಿಯು ಜೀಲಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪ್ರಸ್ತಾಪಿಸಲ್ಪಟ್ಟಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.
7. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆಯುವಾಗ ಯಾವ ವಂತಿಗೆ ಹಣವನ್ನು ನೀಡಿಲ್ಲ.
8. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸಾರ ವ್ಯಾಸಂಗ ಮಾಡುತ್ತಿದ್ದಾರೆ.
9. ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ಶುಲ್ಕ ವಿನಾಯಿತಿಯ ಹಣವನ್ನು ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ಮರುಪಾವತಿ ಮಾಡಲಾಗಿದೆ. ಪಾವತಿ ಮಾಡಿದ ಸ್ಟ್ಯಾಂಪ್ ರಶೀದಿಯನ್ನು ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅ. ಸಂಖ್ಯಾತರ ಇಲಾಖೆಗೆ ಕಳುಹಿಸಿ ಕೊಡಲಾಗಿದೆ. ಕ್ರ. ಸಂ.----------------------------- ದಿನಾಂಕ:--------------------.
10. ಪಾವತಿ ಮಾಡದೇ ಇರುವ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಪ್ರತಿಯನ್ನು ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಕಳುಹಿಸಿದೆ ಎಂದು ದೃಢೀಕರಿಸಿದ ಕ್ರ. ಸಂ. ----------------------------
ದಿನಾಂಕ:--------------------.
11. ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದವರೆಂದು ದೃಢೀಕರಿಸಲಾಗಿದೆ.

ದಿನಾಂಕ:

ಸ್ಥಳ:

ಪ್ರಾಂಶುಪಾಲರು